ಪಾಠ–3 ಜನವರಿ 12–18

# ಏಳು ಸಭೆಗಳಿಗೆ ಯೇಸುವಿನ ಸಂದೇಶಗಳು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ :** ಪ್ರಕಟನೆ 2:8–11, ಪ್ರಕಟನೆ 2:12–17, ಪ್ರಕಟನೆ 2:18–29, ಪ್ರಕಟನೆ 3:1–6, ಪ್ರಕಟನೆ 3:7–13, ಪ್ರಕಟನೆ 3:14–22, ಯೆಶಾಯ 61:10.

**ಸ್ಮರಣವಾಕ್ಯ : "ನಾನು ಜಯ ಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕೂತುಕೊಂಡೆನು; ಹಾಗೆಯೇ ಜಯ ಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕೂತುಕೊಳ್ಳುವಂತೆ ಮಾಡುವೆನು" (ಪ್ರಕಟನೆ 3:21).**

ಪತ್ಮೋಸ್‌ನಿಂದ ಯೇಸು ಏಳು ಸಂದೇಶಗಳನ್ನು ಒಳಗೊಂಡ ಪತ್ರವನ್ನು ಯೋಹಾನನ ಮೂಲಕ ತನ್ನ ಜನರಿಗೆ ಕಳುಹಿಸಿದನು. ಆ ಸಂದೇಶಗಳು ಯೋಹಾನನ ದಿನದ ಏಷ್ಯಾ ಸಭೆಗಳಿಗೆ ಸಂಬಂಧಿಸಿವೆ, ಅವರು ಇತಿಹಾಸದುದ್ದಕ್ಕೂ, ಸಭೆ ಪರಿಸ್ಥಿತಿಗಳನ್ನು ಪ್ರವಾದನೆಯಲ್ಲಿರುವ ಸಂಕೇತಗಳಲ್ಲಿ ಚಿತ್ರಿಸುತ್ತಾರೆ.

ಈ ಸಂದೇಶಗಳನ್ನು ಅಕ್ಕ–ಪಕ್ಕದಿಂದ ಹೋಲಿಸಿದರೆ ಅವರು ಒಂದೇ ರೀತಿಯ ಆರು ಹಂತದ ರಚನೆಯನ್ನು ಅನುಸರಿಸುತ್ತಾರೆ ಎಂದು ತೋರಿಸುತ್ತದೆ. ಪ್ರತಿಯೊಂದು ಯೇಸುವಿನ ಹೆಸರಿನೊಂದಿಗೆ ತೆರೆದು ನಿರ್ದಿಷ್ಟ ಸಭೆಯನ್ನು

ಸಂಬೋಧಿಸುತ್ತದೆ. ಎರಡನೇ ಭಾಗವು "ಈ ವಿಷಯಗಳು ಹೇಳುತ್ತವೆ" ಎಂಬ ಈ ವಾಕ್ಯಂಗಭಾಗದೊಂದಿಗೆ ಪ್ರಾರಂಭವಾಗುತ್ತದೆ. ಅಧ್ಯಾಯ 1 ರಲ್ಲಿ ಕಂಡುಬರುವ ವರ್ಣನೆಗಳು ಮತ್ತು ಸಂಕೇತಗಳನ್ನು ಬಳಸಿಕೊಂಡು ಪ್ರತಿ ಸಭೆಗೆ ಯೇಸು ತನ್ನನ್ನು ಸ್ವತಃ ಪರಿಚಯಿಸುತ್ತಾನೆ. ಯೇಸುವಿನ ಆ ವರ್ಣನೆಗಳು ಪ್ರತಿ ಸಭೆಯ ನಿರ್ದಿಷ್ಟ ಅಗತ್ಯಗಳಿಗೆ ಸೂಕ್ತವಾಗಿದೆ. ಆದ್ದರಿಂದ ಯೇಸು ತಮ್ಮ ವಿಭಿನ್ನ ಹೋರಾಟಗಳನ್ನು ಮತ್ತು ಸನ್ನಿವೇಶಗಳನ್ನು ಪೂರೈಸುವ ಸಾಮರ್ಥ್ಯವನ್ನು ತೋರಿಸಿದನು. ಮುಂದೆ ಯೇಸು ಸಭೆಯ ಮೌಲ್ಯವನ್ನು ನೀಡುತ್ತಾನೆ. ಆಮೇಲೆ ಸಭೆ ಹೇಗೆ ಇಕ್ಕಟ್ಟಿನಿಂದ ಪಾರಾಗಬೇಕೆಂಬ ಸಲಹೆಯನ್ನು ನೀಡುತ್ತಾನೆ. ಅಂತಿಮವಾಗಿ, ಪ್ರತಿ ಸಂದೇಶವು ಆತ್ಮನ ಸಂದೇಶವನ್ನು ಕೇಳುವ ಮನವಿಯೊಂದಿಗೆ ಮತ್ತು ಜಯಶಾಲಿಗೆ ಭರವಸೆಗಳನ್ನು ನೀಡುವುದರೊಂದಿಗೆ ಮುಕ್ತಾಯವಾಗುತ್ತದೆ.

*** ಜನವರಿ 19 ರ ಸಬ್ಬತ್ತಿಗೆ ಸಿದ್ಧತೆಗೆ ಈ ವಾರದ ಪಾಠವನ್ನು ಅಧ್ಯಯನ ಮಾಡಿ.**

**ಭಾನುವಾರ** **ಜನವರಿ, 13**

## ಸ್ಮುರ್ನ ಮತ್ತು ಪೆರ್ಗಮಗೆ ಕ್ರಿಸ್ತನ ಸಂದೇಶಗಳು

ಸ್ಮುರ್ನ ಸುಂದರವಾದ ಶ್ರೀಮಂತ ನಗರವಾಗಿತ್ತು. ಆದರೆ ಇದು ಕಡ್ಡಾಯವಾಗಿ ಚಕ್ರವರ್ತಿಯನ್ನು ಆರಾಧಿಸುವ ಆಜ್ಞೆಯಿದ್ದ ಕೇಂದ್ರವಾಗಿತ್ತು. ಈ ಆಜ್ಞೆಯನ್ನು ಸಮ್ಮತಿಸಲು ನಿರಾಕರಿಸುವುದು ನ್ಯಾಯಶಾಸ್ತ್ರದ ಸ್ಥಾನಮಾನವನ್ನು ಕಳೆದುಕೊಳ್ಳಲು ಹಿಂಸೆಗೂ ಆದಾಗ್ಯೂ ರಕ್ತ ಸಾಕ್ಷಿಗೆ ಮುನ್ನೆಡೆಸುತ್ತದೆ.

ಪ್ರಕಟನೆ 2:3–11 ಓದಿ. ಸಭೆಯ ಪರಿಸ್ಥಿತಿಗೆ ಸಂಬಂಧಿಸಿದಂತೆ ಯೇಸು ತನ್ನನ್ನು ಸ್ವತಃ ಹೇಗೆ ಈ ಸಭೆಗೆ ತೋರಿಸಿಕೊಡುತ್ತಾನೆ? ಸಭೆ ಯಾವ ಪರಿಸ್ಥಿತಿಯಲ್ಲಿ ಇದೆ? ಏನು ಬರುತ್ತದೆ ಎಂಬುದರ ಬಗ್ಗೆ ಯೇಸು ಸಭೆಗೆ ಯಾವ ಎಚ್ಚರಿಕೆಯನ್ನು ನೀಡುತ್ತಾರೆ?

ಸ್ಮುರ್ನದಲ್ಲಿನ ಸಭೆಗೆ ಸಂದೇಶವು ಅಪೋಸ್ತಲರ ಯುಗದ ನಂತರದ ಸಭೆಗೆ ದೈವ ಪ್ರೇರಿತವಾದ ಬಿನ್ನಹವಾಗಿದೆ. ರೋಮ್ ಸಾಮ್ರಾಜ್ಯದಿಂದ ಕ್ರೈಸ್ತರು

ಕೆಟ್ಟದಾಗಿ ಹಿಂಸೆಗೊಳಗಾಗಿದ್ದರು. ಪ್ರಕಟನೆ 2:10 ರಲ್ಲಿ ಹೇಳುವ "ಹತ್ತು ದಿನಗಳು" ಕ್ರಿ.ಶ. 303 ರಿಂದ ಕ್ರಿ.ಶ. 313 ರವರೆಗೆ ಡಯೋಕ್ಲೆಚಿಯನ್ನನು ಮಾಡಿದ ಹಿಂಸೆಯನ್ನು ತೋರಿಸುತ್ತದೆ, ಕಾನ್ಸ್ಟೆಂಟೈನನು 'ದ ಎಡಿಕ್ಟ್ ಆಫ್ ಮಿಲನ್' ಬಿಡುಗಡೆ ಮಾಡಿದಾಗ, ಅದು ಕ್ರೈಸ್ತರಿಗೆ ಧಾರ್ಮಿಕ ಸ್ವಾತಂತ್ರ್ಯ ನೀಡಿತು.

ಪೆರ್ಗಮವು ವಿವಿಧ ವಿಗ್ರಹಾರಾಧಕ ಪಂಥಗಳ ಕೇಂದ್ರವಾಗಿತ್ತು, ಆಸ್ಕ್ಲೆಪೀಯಸ್‌ನು ಗ್ರೀಕರ ಗುಣಪಡಿಸುವ ದೈವ, ರಕ್ಷಕನೆಂದು ಕರೆಯಲ್ಪಟ್ಟು ಮತ್ತು ಸರ್ಪದಿಂದ ಪ್ರತಿನಿಧಿಯಾಗಲ್ಪಟ್ಟ ಪಂಥವು ಕೂಡ ಸೇರಿತ್ತು. ಆಸ್ಲೆಪೀಯಸ್‌ನ ಸಮಾಧಿಗೆ ಎಲ್ಲಾ ಕಡೆಯಿಂದ ಜನರು ಗುಣಹೊಂದಲು ಬಂದರು. ಚಕ್ರವರ್ತಿ ಆರಾಧನೆ ಪಂಥವನ್ನು ಪ್ರೋತ್ಸಾಹ ಮಾಡಲು ಪೆರ್ಗಮವು ಮುನ್ನಡೆಸುವ ಪಾತ್ರ ವಹಿಸಿತ್ತು, ಸ್ಮುರ್ನದಲ್ಲಿದ್ದಂತೆ ಕಡ್ಡಾಯವಾಗಿತ್ತು. ಯಾವುದೇ ವಿಸ್ಮಯವಿಲ್ಲದೆ, ಸೈತಾನನ ಆಸನ ಮತ್ತು ಆತನ ಸಿಂಹಾಸನವಿರುವ ಸ್ಥಳ ಪೆರ್ಗಮವೆಂದು ಯೇಸು ಹೇಳುತ್ತಾರೆ.

ಪ್ರಕಟನೆ 2:12–15 ಓದಿ. ಈ ಸಭೆಗೆ ಯೇಸು ಹೇಗೆ ತನ್ನನ್ನು ತಾನೇ ಪರಿಚಯಿಸಿಕೊಳ್ಳುತ್ತಾನೆ? ಅದರ ಆಧ್ಯಾತ್ಮಿಕ ಪರಿಸ್ಥಿತಿಯ ಬಗ್ಗೆ ಆತನ ಅಂದಾಜು (ಮೌಲ್ಯ) ಏನು?

ಪೆರ್ಗಮದಲ್ಲಿರುವ ಕ್ರೈಸ್ತರು ಸಭೆಯ ಒಳಗಡೆ ಹಾಗೂ ಹೊರಗಡೆ ಶೋಧನೆಗಳನ್ನು ಎದುರಿಸಿದ್ದರು. ಅನೇಕರು ನಂಬಿಗತರಾಗಿ ಉಳಿದರು, ಕೆಲವು "ನಿಕೋಲೈಕ್ಟನ್ಸ್‌ಗಳು" ಶೋಷಣೆಯಿಂದ ತಪ್ಪಿಸಿಕೊಳ್ಳಲು ಮೂರ್ತಿ ಪೂಜೆ ಮಾಡುವವರೊಂದಿಗೆ ರಾಜಿ ಮಾಡಿಕೊಂಡರು. ಧರ್ಮ ತ್ಯಾಗ ಮಾಡಿದ್ದ ಬಿಳಾಮನಂತೆ, ಇಸ್ರಾಯೇಲರು ವಾಗ್ದಾನ ದೇಶಕ್ಕೆ ಹೋಗುವ ಹಾದಿಯಲ್ಲಿ ದೇವರಿಗೆ ವಿರುದ್ಧವಾಗಿ ಪಾಪ ಮಾಡಲು ಮರುಳು ಮಾಡಿದನು (ಅರಣ್ಯಕಾಂಡ 31:16). ಈ ಸದಸ್ಯರು ತಮ್ಮ ನಂಬಿಕೆಯನ್ನು ರಾಜಿ ಮಾಡಿಕೊಳ್ಳಲು, ಹೆಚ್ಚು ಅನುಕೂಲಕರವಾಗಿಯೂ, ಲಾಭದಾಯಕವು ಸಹ ಎಂದು ಕಂಡುಕೊಂಡರು. ಯೆರೂಸಲೇಮಿನ ಸಭಾಮಂಡಲಿ "ವಿಗ್ರಹಕ್ಕೆ ನೈವೇದ್ಯ ಮಾಡಿದ್ದನು" ಮತ್ತು "ಹಾದರವನ್ನು" ನಿಷೇಧಿಸಿದ್ದಾಗ್ಯೂ, ಈ ತೀರ್ಮಾನವನ್ನು ಸಭಾ ಸದಸ್ಯರು

ತಿರಸ್ಕರಿಸುವಂತೆ ಬಿಳಾಮನ ತತ್ವ ಬೋಧಿಸಿತು. ಪೆರ್ಗಮಗೆ ಯೇಸು ನೀಡುವ ಏಕೈಕ ಪರಿಹಾರವೆಂದರೆ "ಪಶ್ಚಾತ್ತಾಪ" (ಪ್ರಕಟನೆ 2:16).

ಪೆರ್ಗಮದಲ್ಲಿರುವ ಸಭೆ ಸುಮಾರು ಕ್ರಿ.ಶ. 313 ರಿಂದ 538 ರವರೆಗೆ ಸಭೆಯ ಪ್ರವಾದನೆ ಚಿತ್ರಣವಾಗಿದೆ. ಸಭೆಯಲ್ಲಿ ಕೆಲವು ನಂಬಿಗಸ್ತರಾಗಿದ್ದರೂ ಸಹ ಆಧ್ಯಾತ್ಮಿಕ ಅವನತಿ ಮತ್ತು ಧರ್ಮಭ್ರಷ್ಟತೆ ವೇಗವಾಗಿ ಹೆಚ್ಚಿದೆ.

"ನನ್ನ ನಂಬಿಕೆ"ಯನ್ನು ನಿರಾಕರಿಸಲಿಲ್ಲ ಎನ್ನುವ ಅರ್ಥವೇನು (ಪ್ರಕಟನೆ 2:13; ಪ್ರಕಟನೆ 14:12 ಮತ್ತು ನೋಡಿ)? "ಸಾಯಬೇಕಾದರೂ ನಂಬಿಗಸ್ತನಾಗಿರು" ಮತ್ತು ನಾವು ನಮ್ಮ ನಂಬಿಕೆಯನ್ನು ನಿರಾಕರಿಸಲು ಒಪ್ಪದಿರುವುದು ಹೇಗೆ ರಾಜಿ ಮಾಡಿಕೊಳ್ಳಲು ಸಹಾಯ ಮಾಡುತ್ತದೆ (ಪ್ರಕಟನೆ 2:10)?

**ಸೋಮವಾರ** **ಜನವರಿ 4**

## ಥುವತ್ತೈರಗೆ ಕ್ರಿಸ್ತನ ಸಂದೇಶ

ಇತರ ನಗರಗಳೊಂದಿಗೆ ಹೋಲಿಸಿದರೆ, ನಮಗೆ ಗೊತ್ತಿರುವ ಹಾಗೆ ಥುವತ್ತೈರ ಯಾವುದೇ ರಾಜಕೀಯ ಅಥವಾ ಸಾಂಸ್ಕೃತಿಕ ಪ್ರಾಮುಖ್ಯತೆಯನ್ನು ಹೊಂದಿಲ್ಲ. ಅಲ್ಲದೆ ಸಭೆ ಅಸ್ಪಷ್ಟವಾಗಿತ್ತು. ವ್ಯಾಪಾರವನ್ನು ನಡೆಸಲು ಅಥವಾ ಉದ್ಯೋಗವನ್ನು ಹೊಂದಲು ರೋಮ್ ಸಾಮ್ರಾಜ್ಯದ ಜನರಿಗೆ ವ್ಯಾಪಾರದ ಸಂಘಗಳಿಗೆ ಸೇರಿಕೊಳ್ಳಬೇಕಾಗಿತ್ತು. ಈ ಅವಶ್ಯಕತೆಯನ್ನು ಜಾರಿಗೊಳಿಸಲು ಥುವತ್ತೈರ ವಿಶೇಷವಾಗಿ ಹೆಸರಾಗಿದೆ. ಸಂಘದ ಸದಸ್ಯರುಗಳು ಸಂಘ ಉತ್ಸವಗಳಲ್ಲಿ ಹಾಜರಾಗಬೇಕಾಗಿತ್ತು ಮತ್ತು ದೇವಾಲಯದ ಆಚರಣೆಗಳಲ್ಲಿ ಪಾಲ್ಗೊಳ್ಳಬೇಕಾಯಿತು. ಅದು ಅನೈತಿಕ ಚಟುವಟಿಕೆಗಳಿಂದ ನಿಷೇಧವನ್ನು ಎದುರಿಸಬೇಕಾಗಿತ್ತು. ಆ ಸಮಯದಲ್ಲಿ ಕ್ರೈಸ್ತರಿಗೆ, ಸುವಾರ್ತೆಗಾಗಿ ಸಂಪೂರ್ಣ ನಿಷೇಧವನ್ನು ಅಥವಾ ಸಂಪೂರ್ಣ ರಾಜಿ ಮಾಡಿಕೊಳ್ಳುವುದರ ನಡುವೆ ಆಯ್ಕೆ ಮಾಡಬೇಕಿತ್ತು.

ಪ್ರಕಟನೆ 2:18–29 ಓದಿ. ಥುವತ್ತೈರ ಸಭೆಗೆ ಯೇಸು ಸ್ವಯಂ ತಾನೇ ಹೇಗೆ ಪರಿಚಯಿಸುತ್ತಾನೆ? ಯೇಸು ಸಭೆಗೆ ಪ್ರಶಂಸಿಸಿದ ಗುಣಗಳು ಯಾವುವು ಮತ್ತು ಯಾವ ಸಮಸ್ಯೆ ಅದನ್ನು ಅಲ್ಲೋಲ ಕಲ್ಲೋಲ ಮಾಡುತ್ತದೆ?

ಪೆರ್ಗಮದ ಸಭೆಯಂತೆಯೇ, ಥುವತ್ತೈರದ ಸಭೆಯು ವಿಗ್ರಹಾರಾಧನೆ ಪರಿಸರಕ್ಕೆ ರಾಜಿಯಾಗಲು ನೂಕಲ್ಪಟ್ಟಿದೆ. 'ಈಜೆಬೇಲ್' ಎಂಬ ಹೆಸರು ಇಸ್ರಾಯೇಲ್ಯರನ್ನು ಧರ್ಮಭ್ರಷ್ಟತೆಗೆ ಕರೆದೊಯ್ಯುವ ರಾಜ ಅಹಾಬನ ಹೆಂಡತಿಯನ್ನು ಸೂಚಿಸುತ್ತದೆ (1 ಅರಸುಗಳು 16:31–33). ಯೇಸು ಈಜೆಬೇಲಳನ್ನು ಆಧ್ಯಾತ್ಮಿಕ ಜಾರತ್ವವೆಂದು ವರ್ಣಿಸುತ್ತಾರೆ (ಪ್ರಕಟನೆ 2:20). ಸತ್ಯವನ್ನು ರಾಜಿ ಮಾಡಿ ಅಶುದ್ಧ ವಿಗ್ರಹಾರಾಧಕ ಆಲೋಚನೆಗಳನ್ನು ಅಳವಡಿಸಿಕೊಂಡ ಸದಸ್ಯರು ಆಕೆಯೊಂದಿಗೆ ಆತ್ಮೀಕ ವ್ಯಭಿಚಾರವನ್ನು ಮಾಡುತ್ತಿದ್ದರು.

ಥುವತ್ತೈರದಲ್ಲಿರುವ ಸಭೆ ಕ್ರಿ.ಶ. 538 ರಿಂದ ಕ್ರಿ.ಶ. 1565 ರವರೆಗಿನ ಕ್ರೈಸ್ತ ಧರ್ಮದ ಸ್ಥಿತಿಯನ್ನು ಸಂಕೇತಿಸುತ್ತದೆ. ಈ ಸಮಯದಲ್ಲಿ ದೇವಜನರಿಗೆ ಅಪಾಯವು ಸಭೆಯ ಹೊರಗಿನಿಂದಲ್ಲ ಆದರೆ ಒಳಗಿನಿಂದ ಬರುತ್ತಿತ್ತು. ಸತ್ಯವೇದದ ಬದಲಾಗಿ ಸಂಪ್ರದಾಯ ಬಂತು. ಕ್ರಿಸ್ತನ ಯಾಜಕತ್ವದ ಬದಲಾಗಿ ಮನುಷ್ಯ ಯಾಜಕತ್ವ ಮತ್ತು ಪವಿತ್ರ ಅವಶೇಷಗಳು ಬಂತು ಮತ್ತು ಕೆಲಸಗಳು ರಕ್ಷಣೆಯ ಸಾಧನವಾಗಿ ಪರಿಗಣಿಸಲಾಯಿತು. ಈ ಭ್ರಷ್ಟ ಪ್ರಭಾವವನ್ನು ಸ್ವೀಕರಿಸಿದವರು ಹಿಂಸೆಗೊಳಗಾಗಿ ಕೊಲ್ಲಲ್ಪಟ್ಟರು ಶತಮಾನಗಳಿಂದಲೂ ಸತ್ಯಸಭೆ ಅರಣ್ಯ ಪ್ರದೇಶಗಳಲ್ಲಿ ಆಶ್ರಯ ಕಂಡುಕೊಂಡಿದೆ (ಪ್ರಕಟನೆ 12:6, 13, 14). ಆದರೆ ಯೇಸು ಅವರ ನಂಬಿಕೆ ಮತ್ತು ಪ್ರೀತಿ, ಕೆಲಸ ಮತ್ತು ಸೇವೆಗಾಗಿ ಥುವತ್ತೈರದಲ್ಲಿರುವ ಸಭೆಯನ್ನು ಪ್ರಶಂಸಿಸುತ್ತಾನೆ. ಧಾರ್ಮಿಕ ಸುಧಾರಣೆ ಮತ್ತು ಸತ್ಯವೇದಕ್ಕೆ ಹಿಂತಿರುಗುವ ಪ್ರಾರಂಭವನ್ನು ಸೂಚಿಸುತ್ತದೆ.

ಪ್ರಕಟನೆ 2:25 "ನಿಮಗಿರುವುದನ್ನು ನಾನು ಬರುವ ತನಕ ಬಿಗಿಯಾಗಿ ಹಿಡಿದುಕೊಂಡಿರಿ" ಎಂಬ ಈ ಮಾತನ್ನು ಆಲೋಚಿಸಿ ಸಾಮುದಾಯಿಕವಾಗಿ ಮತ್ತು ಪ್ರತ್ಯೇಕವಾಗಿ ಆ ಮಾತುಗಳು ನಮಗೆ ಯಾವ ಅರ್ಥಕೊಡುತ್ತದೆ? ನಾವು ಯೇಸುವಿನಿಂದ ಹಿಡಿದುಕೊಳ್ಳಲೇ ಬೇಕಾದ ಯಾವುದನ್ನು ಹೊಂದಿದ್ದೇವೆ?

**ಮಂಗಳವಾರ** **ಜನವರಿ, 15**

## ಸಾರ್ಡಿಸ್‌ಗೆ ಕ್ರಿಸ್ತನ ಸಂದೇಶ

ಸಾರ್ಡಿಸ್‌ಗೆ ಅದ್ಭುತವಾದ ಇತಿಹಾಸವಿತ್ತು. ಆದರೆ ರೋಮ್ ಅವಧಿಯ

ವೇಳೆಗೆ, ನಗರವು ತನ್ನ ಪ್ರತಿಷ್ಠೆಯನ್ನು ಕಳೆದುಕೊಂಡಿದೆ. ಈ ನಗರವು ಇನ್ನೂ ಸಂಪತ್ತನ್ನು ಅನುಭವಿಸುತ್ತಿರುವಾಗ, ಅದರ ವೈಭವ ಪ್ರಸ್ತುತ ವಾಸ್ತವದಲ್ಲಿರದೆ ಹಿಂದಿನ ಇತಿಹಾಸದಲ್ಲಿ ಬೇರೂರಿತ್ತು. ಪ್ರಾಚೀನ ನಗರವು ಕಡಿದಾದ ಬೆಟ್ಟದ ಮೇಲೆ ನಿರ್ಮಿಸಲ್ಪಟ್ಟಿದೆ ಮತ್ತು ಬಹುತೇಕ ಅಜೇಯವಾಗಿತ್ತು ಅಥವಾ ದಾಳಿಗೆ ಬಗ್ಗದಾಗಿತ್ತು. ನಾಗರಿಕರು ತುಂಬಾ ಸುರಕ್ಷಿತವಾಗಿರುವುದರಿಂದ, ನಗರ ಗೋಡೆಗಳನ್ನು ಅಜಾಗರೂಕರಾಗಿ ಕಾವಲು ಕಾಯಲಾಯಿತು.

ಪ್ರಕಟನೆ 3:1–6 ಜೊತೆಗೆ ಮತ್ತಾಯ 24:42–44 ಮತ್ತು 1 ಥೆಸಲೋನಿಕದವರಿಗೆ 5:1–8 ಓದಿ. ಸಾರ್ಡಿಸ್‌ನಲ್ಲಿರುವ ಕ್ರೈಸ್ತರನ್ನು ಅವರ ಆತ್ಮೀಕ ಪರಿಸ್ಥಿತಿಗೆ ಚಿಕಿತ್ಸೆ ಮಾಡಲು ಯಾವ ಮೂರು ವಿಷಯಗಳನ್ನು ಮಾಡಲು ಒತ್ತಾಯ ಪಡಿಸುತ್ತಾನೆ? ನಗರದ ಇತಿಹಾಸಕ್ಕೆ ಅನುಗುಣವಾಗಿ "ಜಾಗರೂಕನಾಗಿರು" ಎಂದು ಯೇಸು ಹೇಗೆ ಎಚ್ಚರಿಕೆ ನೀಡುತ್ತಾರೆ?

ಸಾರ್ಡಿಸ್‌ನಲ್ಲಿ ಕೆಲವು ಕ್ರೈಸ್ತರು ನಂಬಿಗಸ್ತರಾಗಿದ್ದರು ಅದನ್ನು ಯೇಸು ಗುರುತಿಸಿದರು. ಅವರಲ್ಲಿ ಹೆಚ್ಚಿನವರು ಆತ್ಮೀಕವಾಗಿ ಸತ್ತಿದ್ದರು. ಸಭೆಗೆ ಯಾವುದೇ ತೆರೆದ ಪಾಪ ಅಥವಾ ಧರ್ಮಭ್ರಷ್ಟತೆಯನ್ನು ಆಪಾದಿಸಿಲ್ಲ (ಪೆರ್ಗಮ ಮತ್ತು ಥುವತೈರದಲ್ಲಿರುವವರಂತೆ) ಆದರೆ ಆಧ್ಯಾತ್ಮಿಕ ನಿದ್ರಾವಸ್ಥೆಯಲ್ಲಿದ್ದಾರೆ.

ಸಾರ್ಡಿಸ್‌ನಲ್ಲಿರುವ ಸಭೆಗೆ ಸಂದೇಶವು ಧಾರ್ಮಿಕ ಸುಧಾರಣೆಯ ನಂತರದ ಅವಧಿಯಲ್ಲಿ, ಪ್ರೊಟೆಸ್ಟೆಂಟರ ಆಧ್ಯಾತ್ಮಿಕ ಸ್ಥಿತಿಯು ಪ್ರವಾದನೆಗೆ ಅನ್ವಯಿಸುತ್ತದೆ. ಸುಮಾರು ಕ್ರಿ.ಶ. 1565 ರಿಂದ ಕ್ರಿ.ಶ. 1740 ರವರೆಗೆ, ಸಭೆ ನಿರ್ಜೀವ ಔಪಚಾರಿಕತೆಗೆ ಮತ್ತು ಆಧ್ಯಾತ್ಮಿಕ ಸಮಾಧಾನ ಅವನತಿ ಹೊಂದುತ್ತದೆ. ವಿಚಾರವಾದ (ರ್‍ಯಾಷನ್ಯಾಲಿಝುಂ) ಮತ್ತು ಜಾತ್ಯಾತೀತತೆ (ಸೆಕ್ಯೂಲಾರಿಝುಂ)ಗಳು ಏರುತ್ತಿರುವ ಪ್ರಭಾವದ ಪರಿಣಾಮದ ಅಡಿಯಲ್ಲಿ, ಸಭೆಯನ್ನು ರಕ್ಷಿಸುವ ಸುವಾರ್ತೆಯ ಕೃಪೆಗೆ ಮತ್ತು ಕ್ರಿಸ್ತನು ಕ್ಷೀಣವಾಗುವ ವಚನ ಬದ್ಧತೆಗೆ, ಮೌಖಿಪ್ರಾಯಕ್ಕೆ ಜಾಗಕೊಡುವುದು ಮತ್ತು ತಪ್ಪುಶಾಸ್ತ್ರ ಸಂಬಂಧಿತ ಚರ್ಚೆಗಳ ಮೇಲೆ ಗಮನ ಹರಿಸುತ್ತದೆ. ಈ ಅವಧಿಯ ಸಭೆ ಜೀವಂತವಾಗಿ ಕಾಣಿಸಿಕೊಂಡರು ಆತ್ಮೀಕವಾಗಿ ಸತ್ತಿದೆ.

ಸಾರ್ಡಿಸ್‌ಗೆ ಯೇಸುವಿನ ಸಂದೇಶವು ಪ್ರತಿ ಕ್ರೈಸ್ತರ ಹೇಳಿಗೆಗೂ ಅನ್ವಯಿಸುತ್ತದೆ. ಕ್ರಿಸ್ತನ ಮೇಲಣ ಅವರ ಹಿಂದಿನ ನಂಬಿಗಸ್ತಿಕೆಯನ್ನು ಯಾವಾಗಲೂ ಪ್ರಖ್ಯಾತದ ಪದಗಳಲ್ಲಿ ಮಾತನಾಡುವ ಕ್ರೈಸ್ತರಿದ್ದಾರೆ. ದುರದೃಷ್ಟವಶಾತ್, ಇಡೀ ಕ್ರೈಸ್ತರಿಗೆ ತಮ್ಮ ಈಗಿನ ಅನುಭವವನ್ನು ಕ್ರಿಸ್ತನೊಂದಿಗೆ ಹಂಚಿಕೊಳ್ಳಲು ಹೆಚ್ಚು ಇಲ್ಲ. ಅವರ ಧರ್ಮ ಹೆಸರಿಗೆ ಮಾತ್ರವಿರುವುದು, ಹೃದಯದ ನಿಜವಾದ ಧರ್ಮ ಮತ್ತು ಸುವಾರ್ತೆ ನಿಜವಾದ ಕಟ್ಟುಪಾಡನ್ನು ಹೊಂದಿರುವುದಿಲ್ಲ.

ಕ್ರಿಸ್ತನ ನಂಬಿಕೆಯಿಂದಲೇ ಮಾತ್ರ ರಕ್ಷಣೆ ಎಂಬ ಮಹಾನ್ ಸತ್ಯವನ್ನು ನಮ್ಮ ಮುಂದೆ ಇಟ್ಟುಕೊಳ್ಳುವುದು, ದೇವರ ಮುಂದೆ ನಮ್ಮ ಕೆಲಸಗಳು "ಪರಿಪೂರ್ಣ" ಎಂದು ಕಂಡುಬಂದಿಲ್ಲವೆಂದು ನಾವು ಯಾವ ರೀತಿಯಲ್ಲಿ ಹೇಳಬಹುದು? ಆತನ ಮುಂದೆ ನಮ್ಮ ಕೆಲಸಗಳನ್ನು "ಪರಿಪೂರ್ಣ"ಗೊಳಿಸುವುದು ಎಂಬುದರ ಅರ್ಥವೇನು? ಮತ್ತಾಯ 5:44–48 ನೋಡಿ.

**ಬುಧವಾರ** **ಜನವರಿ, 16**

## ಫಿಲಡೆಲ್ಫಿಯಾಗೆ ಕ್ರಿಸ್ತನ ಸಂದೇಶ

ಯೇಸುವಿನಿಂದ ಸಂಬೋಧಿಸಲ್ಪಟ್ಟ ಆರನೇ ಸಭೆ ಫಿಲಡೆಲ್ಫಿಯಾ (ಸಹೋದರ ಪ್ರೀತಿ ಎಂದರ್ಥ). ಈ ನಗರವು ಚಕ್ರಾಧಿಪತ್ಯದ ವ್ಯಾಪಾರದ ರಸ್ತೆಯ ಮೇಲೆ ನೆಲೆಗೊಂಡಿದೆ ಮತ್ತು ದೊಡ್ಡ, ಫಲವತ್ತಾದ ಪ್ರಸ್ಥಭೂಮಿಗೆ – "ತೆರೆದ ಬಾಗಿಲು" – ಹೆಬ್ಬಾಗಿಲಾಗಿ ಕಾರ್ಯನಿರ್ವಹಿಸಿದೆ. ಫಿಲಡೆಲ್ಫಿಯಾ ಜನರಿಗೆ ಆರೋಗ್ಯ ಮತ್ತು ತಪಾಸಣೆಯ ಕೇಂದ್ರವಾಗಿತ್ತೆಂದು ಭೂ ಶೋಧನೆಗಳು ತಿಳಿಸುತ್ತವೆ. ಆಗಾಗ್ಗೆ ಆಗುವ ಭೂಕಂಪಗಳಿಂದ ಅಲ್ಲಾಡಿಸಲ್ಪಟ್ಟಿದೆ. ನಗರದ ನಿವಾಸಿಗಳು ಹಳ್ಳಿಗಾಡಿನ ಕಡೆಗೆ ತೆರಳಿದರು. ವಿನಮ್ರತೆಯಿಂದ ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು.

ಪ್ರಕಟನೆ 3:7–9 ಓದಿ. ಈ ಸಭೆಯ ಪರಿಸ್ಥಿತಿಗೆ ಸಂಬಂಧಿಸಿದಂತೆ ಯೇಸು ತನ್ನನ್ನು ತಾನೇ ಹೇಗೆ ತೋರಿಸುತ್ತಾನೆ? ಯೇಸುವಿನ ಹೇಳಿಕೆಯು "ನಿಮ್ಮಲ್ಲಿ ಸ್ವಲ್ಪ ಶಕ್ತಿಯನ್ನು ಹೊಂದಿದೆ" (ಪ್ರಕಟನೆ 3:8) ಸಭೆಯ ಸ್ಥಿತಿಯ ಬಗ್ಗೆ ಏನು ಹೇಳುತ್ತದೆ?

1740 ರಿಂದ 1844 ರವರೆಗೆ ಗ್ರೇಟ್ ಬ್ರಿಟನ್ ಮತ್ತು ಅಮೇರಿಕಾದ ಮೊದಲ ಮತ್ತು ಎರಡನೇಯ ಜಾಗೃತಗೊಳಿಸುವಿಕೆ ಸಮಯದಲ್ಲಿ ದೊಡ್ಡ ಪ್ರೊಟೆಸ್ಟೆಂಟ್ ಪುನರುಜ್ಜೀವನಕ್ಕೆ ಸಭೆಯ ಸಂದೇಶದ ಪ್ರವಾದನೆಗೆ ಅನ್ವಯಿಸುತ್ತದೆ. ಅವರು ಹೊಂದಿದ್ದ ಬೆಳಕನ್ನು ನೀಡಿದಾಗ, ಆ ಸಮಯದಲ್ಲಿ ದೇವರ ಜನರು "ನಿನ್ನ ವಾಕ್ಯವನ್ನು" (ಪ್ರಕಟನೆ 3:8) ಇಟ್ಟುಕೊಳ್ಳಲು ಹೆಚ್ಚುತ್ತಿರುವ ಮಹತ್ವವಿದೆ. "ತೆರೆದ ಬಾಗಿಲು" ಪರಲೋಕ ದೇವದರ್ಶನ ಗುಡಾರಕ್ಕೆ ಹೋಗುವ ಮಾರ್ಗವಾಗಿದೆ, ಏಕೆಂದರೆ "ನನ್ನ ದೇವರ ಆಲಯ" (ಪ್ರಕಟನೆ 3:12; ಪ್ರಕಟನೆ 4:1,2 ಅನ್ನು ಹೋಲಿಕೆ ಮಾಡಿ) ವೆಂದು ಉಲ್ಲೇಖಿಸಲ್ಪಟ್ಟಿದೆ. ಒಂದು ಬಾಗಿಲನ್ನು ಮುಚ್ಚಲಾಯಿತು ಮತ್ತು 1844 ರಲ್ಲಿ ಕ್ರಿಸ್ತನ ಮರಣ ಯಾಜಕನ ಸೇವೆಯಲ್ಲಿ ನಡೆಯುವ ಬದಲಾವಣೆಯಿಂದ ಮತ್ತೊಂದು ಬಾಗಿಲು ತೆರೆಯಿತು ಎಂದು ಸೂಚಿಸುತ್ತದೆ.

ಪ್ರಕಟನೆ 3:10–13 ಓದಿ. ಆ ಸಮಯವು ನಮಗೆ ಕಡಿಮೆಯಿದೆ ಮತ್ತು ಯೇಸುವಿನ ಬರುವಿಕೆಯು ಸಮೀಪಿಸುತ್ತಿದೆ ಎಂದು ಯಾವ ಸೂಚನೆಗಳು ನೀಡಲ್ಪಡುತ್ತವೆ? ದೇವರ ಹೆಸರು ಆತನ ಜನರ ಮೇಲೆ ಬರೆಯಲ್ಪಟ್ಟಿದೆ ಎಂಬುದರ ಪ್ರಾಮುಖ್ಯತೆ ಏನು (2 ತಿಮೊಥೆ 2:19 ನೋಡಿ)? ಒಂದು ಹೆಸರು ಒಬ್ಬ ವ್ಯಕ್ತಿಯ ಗುಣಗಳನ್ನು ಪ್ರತಿನಿಧಿಸಿದರೆ (ವಿಮೋಚನಕಾಂಡ 34:6) ದೇವರ ಹೆಸರನ್ನು ಹೊಂದಿರುವವರ ಬಗ್ಗೆ ನಮಗೆ ಏನು ಹೇಳುತ್ತದೆ?

ಅಟ್ಲಾಂಟಿಕದ ಎರಡೂ ಭಾಗಗಳ ಸಭೆಗಳಲ್ಲಿ ಮಹಾಪುನರುಜ್ಜೀವನಗಳು ಉಂಟಾದವು 1844 ವರ್ಷಗಳವರೆಗೂ ಕ್ರಿಸ್ತನ ಶೀಘ್ರ ಬರೋಣದ ಸಂದೇಶವು ವಿಶ್ವದ ಅನೇಕ ಭಾಗಗಳಲ್ಲಿ ಘೋಷಿಸಲ್ಪಟ್ಟಿತು. ಜಯಗಳಿಸುವವರ ಮೇಲೆ ಆತನ ಹೆಸರನ್ನು ಬರೆಯುವ ದೇವರ ಭರವಸೆಯು ತನ್ನ ಜನರಲ್ಲಿ ದೇವರ ಗುಣ ಕಾಣುತ್ತದೆ ಎಂದು ಸೂಚಿಸುತ್ತದೆ. ಕ್ರಿಸ್ತನು ಶೀಘ್ರದಲ್ಲೇ ಬರುತ್ತಾನೆ ಎಂಬ ಸಂದೇಶದಂತೆಯೇ ಕ್ರಿಸ್ತನು ತನ್ನ ಜನರ ಪಾಪಗಳನ್ನು ಕ್ಷಮಿಸುವ ಮೂಲಕ ಮತ್ತು ಆತನ ಆಜ್ಞೆಗಳನ್ನು ಅವರ ಹೃದಯದಲ್ಲಿ ಬರೆಯುವ ಮೂಲಕ ತನ್ನ ಜನರನ್ನು ಆ ಮಹಾಘಟನೆಗೆ ಸಿದ್ಧಪಡಿಸುವೆ ಎಂದು ಭರವಸೆ ನೀಡುತ್ತಾನೆ (ಫಿಲಿಪ್ಪಿಯವರಿಗೆ 1:6; ಇಬ್ರಿಯರಿಗೆ 10:16, 17 ನೋಡಿ).

ಕ್ರಿಸ್ತನು ಶೀಘ್ರದಲ್ಲೇ ಬರುವ ನಿರೀಕ್ಷೆ ನಿಮಗೇನು ಅರ್ಥಕೊಡುತ್ತದೆ? ಕ್ರಿಸ್ತನು ಆರಂಭಿಸಿದ ಕೆಲಸವನ್ನು ಪೂರ್ಣಗೊಳಿಸುತ್ತಾನೆ ಎಂಬ ವಾಗ್ದಾನ ನಮಗೆ ಹೇಗೆ ಭರವಸೆ ಮೂಡಿಸುತ್ತದೆ?

**ಗುರುವಾರ** **ಜನವರಿ 17**

## ಲವೊದಿಕೀಯದಲ್ಲಿ ಕ್ರೈಸ್ತರು

ಯೇಸುವಿನಿಂದ ಸಂಬೋಧಿಸಲ್ಪಟ್ಟ ಕೊನೆ ಸಭೆಯು ಲವೊದಿಕೀಯದಲ್ಲಿದೆ. ಅದು ವ್ಯಾಪಾರದ ರಸ್ತೆಯ ಮೇಲೆ ನೆಲೆಗೊಂಡಿರುವ ಒಂದು ಶ್ರೀಮಂತ ನಗರವಾಗಿತ್ತು. ಇದು ಉಣ್ಣೆ ತಯಾರು ಮಾಡುವ ಕಾರ್ಖಾನೆಗೆ ಹೆಸರುವಾಸಿಯಾಗಿದೆ. ಅದರ ಬ್ಯಾಂಕು (ಇದು ಒಂದು ಬೃಹತ್ ಪ್ರಮಾಣದಲ್ಲಿ ಚಿನ್ನ ಹೊಂದಿತ್ತು); ಮತ್ತು ವೈದ್ಯಕೀಯ ಶಾಲೆ, ಅದು ಕಣ್ಣಿಗೆ ಅಂಜನವನ್ನು ಉತ್ಪಾದಿಸುತ್ತಿತ್ತು. ಲವೊದಿಕೀಯದ ಸಮೃದ್ಧಿಯು ತನ್ನ ನಾಗರಿಕರನ್ನು ಸ್ವತಃ ಸಂಪೂರ್ಣತೆಯಿಂದ ತುಂಬಿಸಿದೆ. ಕ್ರಿ.ಶ. 60 ರಲ್ಲಿ ಭೂಕಂಪದಿಂದ ನಗರ ನಾಶವಾದಾಗ, ನಾಗರಿಕರು ರೋಮ್‌ನಿಂದ ದೊರೆತ ನೆರವನ್ನು ನಿರಾಕರಿಸಿದರು, ಅವರು ಕೆಲಸ ಮಾಡಬೇಕಾಗಿರುವುದೆಂದು ಅವರು ಹಕ್ಕಿನಿಂದ ಹೇಳಿದರು. ನಗರವು ನೀರಿನ ಕೊರತೆಯಿಂದಾಗಿ, ಹೈರಾಪೊಲಿಸ್‌ನಲ್ಲಿರುವ ಬಿಸಿನೀರಿನ ಬುಗ್ಗೆಗಳಿಂದ ಬಂದ ನೀರನ್ನು ಕಾಲುವೆಗಳ ಮೂಲಕ ಸರಬರಾಜು ಮಾಡಲಾಯಿತು. ಲವೊದಿಕೀಯದಿಂದ ಈ ಮೂಲವು ದೂರವಾಗಿದ್ದರಿಂದ, ನೀರು ಅಲ್ಲಿಗೆ ಬರುವ ತನಕ ಉಗುರು ಬೆಚ್ಚಗಾಯಿತು.

ಪ್ರಕಟನೆ 3:14–17 ಜೊತೆ ಹೋಶೇಯ 12:8ನ್ನು ಓದಿರಿ. ನಗರದ ಆತ್ಮವಿಶ್ವಾಸದ ಮನಸ್ಸು ಲವೊದಿಕೀಯ ಕ್ರೈಸ್ತರ ಮೇಲೆ ಹೇಗೆ ವ್ಯಾಪಿಸಿತು?

ಯೇಸು ಲವೊದಿಕೀಯ ಕ್ರೈಸ್ತರ ಗಂಭೀರ ಪಾಪವಾದ ನಾಸ್ತಿಕತೆ ಅಥವಾ ಧರ್ಮಭ್ರಷ್ಟತೆಯನ್ನು ಖಂಡಿಸಲಿಲ್ಲ. ಬದಲಿಗೆ, ಅವರ ಸಂತೋಷ ಆತ್ಮೀಕ ನಿದ್ರಾಲಸ್ಯ ಸಮಸ್ಯೆಗೆ ಕಾರಣವಾಯಿತು. ನೀರು ನಗರವನ್ನು ತಲುಪುದಿದ್ದಂತೆಯೇ ನೆನಪಿಗೆ ತರುವುದು ಅವರು ತಣ್ಣಗೂ ಅಲ್ಲ ಅಥವಾ ಬಿಸಿಯಾಗಿ ಇರಲಿಲ್ಲ, ಆದರೆ ಉಗುರು ಬೆಚ್ಚಗಿದ್ದರು. ಅವರು ಅಧಿಕಾರಯುತದಿಂದ ಶ್ರೀಮಂತರೆಂದು

ಮತ್ತು ನಮಗೇನು ಅಗತ್ಯವಿಲ್ಲವೆಂದು ಹೇಳಿದರು; ಆದಾಗ್ಯೂ, ಅವರು ಬಡವರು ಮತ್ತು ಅವರ ಆತ್ಮೀಕ ಸ್ಥಿತಿ ಬೆತ್ತಲಾಗಿ ಮತ್ತು ಕುರುಡಾಗಿತ್ತು.

ಲವೊದಿಕೀಯ ಸಭೆ ಈ ಭೂಮಿಯ ಇತಿಹಾಸದ ಅಂತ್ಯದಲ್ಲಿ ದೇವರ ಸಭೆಯ ಆತ್ಮೀಕ ಸ್ಥಿತಿಯನ್ನು ಸಂಕೇತಿಸುತ್ತದೆ, ಪ್ರಕಟನೆಯ ಕೆಲವು ಕೊನೆ ಭಾಗಗಳು ಮುಕ್ತಾಯ ಕಾಲದೊಂದಿಗೆ ಸಂಬಂಧ ಹೊಂದಿದೆ ಎಂದು ತೋರಿಸುತ್ತದೆ. ಅಂತಹ ಒಂದು ಸಂಬಂಧ ಪ್ರಕಟನೆ 16:15 ರಲ್ಲಿ ಯೇಸು ಹೇಳುವ ಎಚ್ಚರಿಕೆಯನ್ನು ತೋರಿಸುವುದು. ಆತ್ಮೀಕ ನಗ್ನವಾಗಿದ್ದ ಲವೊದಿಕೀಯಗೆ ಕ್ರಿಸ್ತನ ನೀತಿಯನ್ನು ತೋರಿಸುವ "ಬಿಳಿ ವಸ್ತ್ರಗಳು" ಬೇಕಾಗಿದೆ (ಪ್ರಕಟನೆ 3:18). ಆರ್ಮಗೆದೋನ್ ಎಂಬ ಆತ್ಮೀಕ ಯುದ್ಧ ಸಂಬಂಧ ನಡುವೆ ಒಬ್ಬರ ವಸ್ತ್ರಗಳನ್ನು ಕಾಪಾಡಿಕೊಳ್ಳಲು ಮತ್ತು ಬೆತ್ತಲೆಯಾಗಿ ನಡೆಯದಂತೆ ಎಚ್ಚರಿಕೆ ನೀಡಿದೆ. ಯೇಸು ಎಚ್ಚರಿಸುವ ಸಮಯವು ಮೊದಲಿಗೆ ವಿಚಿತ್ರವಾಗಿ ತೋರುತ್ತದೆ. ಏಕೆಂದರೆ ಈ ಉಡುಪುಗಳನ್ನು ಸ್ವೀಕರಿಸಲು ಸಾಧ್ಯವಿಲ್ಲ. ಎಲ್ಲದರ ನಂತರ, ಈಗಾಗಲೇ ಎಲ್ಲರಿಗೂ ಕೃಪೆಯ ಬಾಗಿಲು ಮುಚ್ಚಲಾಗುತ್ತದೆ ಎಂದು ಕಾಣಿಸುತ್ತದೆ. ಆದರೆ ಆರನೆಯ ಉಪದ್ರವ ಎಚ್ಚರಿಕೆಯಿಂದಿರಬೇಕು. ಆ ಭೀಕರ ಘರ್ಷಣೆಯ ಮುಂಚಿತವಾಗಿ ಸಿದ್ಧವಾಗಲು ಲವೊದಿಕೀಯದವರಿಗೆ ಯೇಸು ನೆನಪಿಸಲು ಬಯಸುತ್ತಾರೆ. ಅದು ಶಾಶ್ವತವಾಗಿ ಗತಿಸುವ ಮುನ್ನವೇ ಹೀಗಾಗಿ ಪ್ರಕಟನೆ 16:15 ರಲ್ಲಿ ಲವೊದಿಕೀಯದವರಿಗೆ ಎಚ್ಚರಿಕೆ ನೀಡುತ್ತಾರೆ. ಅವರು ಯೇಸುವಿನ ಸಲಹೆಯನ್ನು ಪಾಲಿಸದಿದ್ದರೆ ಮತ್ತು ಬದಲಾಗಿ ಬೆತ್ತಲೆಯಾಗಿಯೆ ಉಳಿಯಲು ಆಯ್ಕೆ ಮಾಡಿಕೊಂಡರೆ (ಪ್ರಕಟನೆ 3:17, 18), ಆತನು ಬರುವ ಸಮಯದಲ್ಲಿ ಅವರು ಕಳೆದು ಹೋಗುವರು ಮತ್ತು ನಾಚಿಕೆಗೆ ಈಡಾಗುತ್ತಾರೆ (ಯೋಹಾನ 2:28–3:3 ನೋಡಿ).

ಯೇಸು ಲವೊದಿಕೀಯದವರನ್ನು ಪ್ರೀತಿಸುತ್ತಾನೆಂದು ಅವರಿಗೆ ಭರವಸೆ ಕೊಟ್ಟನು. ಅವರು ಪಶ್ಚಾತ್ತಾಪಪಡುವಂತೆ ಅವರಿಗೆ ಮನವಿ ಮಾಡುತ್ತಾನೆ (ಪ್ರಕಟನೆ 3:19). ಸ್ವತಃ ತನ್ನನ್ನು ಪ್ರೇಮಿಯೆಂದು ಚಿತ್ರಿಸುವ ಮೂಲಕ ತನ್ನ ಮನವಿಯನ್ನು ಮುಕ್ತಾಯಗೊಳಿಸುತ್ತಾನೆ. ಪರಮಗೀತ 5:2–6, ಬಾಗಿಲ ಬಳಿ

ನಿಂತುಕೊಂಡು ತಟ್ಟುತ್ತಾ ಮತ್ತು ಬಳಗೆ ಬರಲು ಮನವೊಲಿಸುತ್ತಾರೆ (ಪ್ರಕಟನೆ 3:20). ಯಾರ್ಯಾರು ಬಾಗಿಲನ್ನು ತೆರೆದು ಮತ್ತು ಒಳಗೆ ಅವರನ್ನು ಬರಗೊಳಿಸುವರೋ ಅವರೊಂದಿಗೆ ನಿಕಟ ಭೋಜನ ಮಾಡುವ ಭರವಸೆಯನ್ನು ನೀಡುತ್ತಾರೆ. ಅಂತಿಮವಾಗಿ, ಅವನ ಸಿಂಹಾಸನದ ಮೇಲೆ ಆತನೊಂದಿಗೆ ಆಳ್ವಿಕೆ ಮಾಡುತ್ತಾರೆ (ಪ್ರಕಟನೆ 20:4 ನೋಡಿ).

ಲವೊದಿಕೀಯದವರಿಗೆ ಯೇಸು ಯಾವ ಸಲಹೆ ನೀಡುತ್ತಾನೆ? ಚಿನ್ನ, ಬಿಳಿ ಉಡುಪುಗಳು ಮತ್ತು ಕಣ್ಣಿನ ಅಂಜನ ಯಾವುದನ್ನು ಸಾಂಕೇತಿಸುತ್ತದೆ? ಈ ಸಲಹೆ ಸೆವೆಂತ್ ಡೇ ಅಡೆಂಟಿಸ್ಟರಾದ ನಮಗೆ ಏನು ಹೇಳುತ್ತದೆ; ನಾವೇ ಲವೊದಿಕೀಯ ಸಭೆ ಎಂದು ಗುರುತಿಸಿದವರು ಯಾರು?

**ಶುಕ್ರವಾರ** **ಜನವರಿ 18**

**ಹೆಚ್ಚಿನ ಆಲೋಚನೆ :** ಎಲೆನ್ ಜಿ ವೈಟ್ "ದ ರೆವೆಲ್ಯೂಷನ್" ಪುಟಗಳು 578–592, ಇನ್ ದ ಆಕ್ಟ್ಸ್ ಆಫ್ ದ ಅಪೋಸ್ತಲ್ಸ್ ಓದಿ.

ಸಭೆಗಳಿಗೆ ಏಳು ಸಂದೇಶಗಳು ಏಳು ಸಭೆಗಳಲ್ಲಿನ ಆತ್ಮೀಕ ಕುಸಿತವನ್ನು ತೋರಿಸುತ್ತದೆ. ಎಫೆಸದ ಸಭೆ ಇನ್ನೂ ನಂಬಿಗಸ್ತವಾದದ್ದು, ಆದರೂ ಇದು ತನ್ನ ಮೊದಲ ಪ್ರೀತಿಯನ್ನು ಕಳೆದುಕೊಂಡಿತು. ಸ್ಮುರ್ನ ಮತ್ತು ಫಿಲಡೆಲ್ಫಿಯಾದಲ್ಲಿನ ಸಭೆಗಳು ಹೆಚ್ಚಾಗಿ ನಂಬಿಗಸ್ತವಾಗಿವೆ. ಆ ಸಭೆಗಳಲ್ಲಿನ ಬಹುಪಾಲು ವಿಶ್ವಾಸಿಗಳು ಅಪೋಸ್ತಲರ ಶುದ್ಧ ನಂಬಿಕೆಯಿಂದ ಸಂಪೂರ್ಣವಾಗಿ ಧರ್ಮಭ್ರಷ್ಟರಾಗುವರೆಗೂ ಪೆರ್ಗಮ ಥುವತ್ತೈರದವರು ಹೆಚ್ಚೆಚ್ಚು ರಾಜಿ ಮಾಡಿಕೊಳ್ಳುತ್ತಿದ್ದರು. ಸಾರ್ಧಿಸ್ ಸಭೆಯು ಅತ್ಯಂತ ಗಂಭೀರ ಪರಿಸ್ಥಿತಿಯಲ್ಲಿತ್ತು. ಈ ಸಭೆಯಲ್ಲಿ ಹೆಚ್ಚಿನ ಕ್ರೈಸ್ತರು ಸುವಾರ್ತೆಗೆ ಏಕಮತವಿರಲಿಲ್ಲ. ಆದರೆ ಫಿಲಡೆಲ್ಫಿಯಾ ಸಭೆ ಕೆಲವು ನಂಬಿಗಸ್ತರನ್ನು ಪ್ರತಿನಿಧಿಸುತ್ತಿತ್ತು. ಲವೊದಿಕೀಯ ಸಭೆ ಆತ್ಮೀಕ ನಿದ್ರಾಲಸ್ಯ ಮತ್ತು ಅಂತಹ ಸಮಾಧಾನಕರ ಪರಿಸ್ಥಿತಿಯಲ್ಲಿತ್ತು ಆ ಸಭೆಯ ಬಗ್ಗೆ ಹೇಳಲು ಒಳ್ಳೆಯದೇನು ಇರಲಿಲ್ಲ...

ಪ್ರತಿ ಸಂದೇಶದ ಮುಕ್ತಾಯದಲ್ಲಿ, ಯೇಸು ತನ್ನ ಸಲಹೆಯನ್ನು ಸ್ವೀಕರಿಸುವ ಸಭೆಯವರಿಗೆ ಭರವಸೆ ನೀಡುತ್ತಾನೆ. ಆದಾಗ್ಯೂ, ಸಭೆಗಳಲ್ಲಿ ಕಂಡು ಬರುವ

ಸ್ಪಷ್ಟ ಆತ್ಮೀಕ ಕುಸಿತದೊಂದಿಗೆ ನೀಡಿದ ಭರವಸೆಗಳ ಪ್ರಮಾಣವು ಮೊದಲ ಸಂದೇಶವನ್ನು ನೀಡಿದನೋ ಅದು ಒಂದೇ ವಾಗ್ದಾನವನ್ನು ಪಡೆಯುತ್ತದೆ. ಹಿಂದಿನ ಸಭೆಗಿಂತ ಹೆಚ್ಚು ಭರವಸೆಗಳನ್ನು ಪಡೆಯುತ್ತಾರೆ. ಅಂತಿಮವಾಗಿ, ಲವೊದಿಕೀಯದಲ್ಲಿರುವ ಸಭೆ, ಒಂದೇ ಒಂದು ಭರವಸೆಯನ್ನು ಪಡೆದಾಗ, ಎಲ್ಲದರಲ್ಲಿಯೂ ಬಹುಶ್ರೇಷ್ಠವಾದ ವಾಗ್ದಾನವನ್ನು ಪಡೆಯುತ್ತದೆ. ಯೇಸುವಿನ ಸಿಂಹಾಸನವನ್ನು ಹಂಚಿಕೊಳ್ಳುತ್ತದೆ (ಪ್ರಕಟನೆ 3:21).

## ಚರ್ಚಿಸಬೇಕಾದ ಪ್ರಶ್ನೆಗಳು

1. ಸಭೆಗಳಲ್ಲಿನ ಆತ್ಮೀಕತೆಯ ಕುಸಿತದೊಂದಿಗೆ ಪ್ರತಿ ಸತತ ಸಭೆಗೆ ಹೆಚ್ಚುತ್ತಿರುವ ಭರವಸೆಯು ಹೇಗೆ ಹೆಚ್ಚುತ್ತದೆ. ಪಾಪವು ಹೆಚ್ಚಾಗುವಾಗ, ಕೃಪೆಯು ಇನ್ನಷ್ಟು ಹೆಚ್ಚಾಗುತ್ತದೆ ಎಂಬ ಹೇಳಿಕೆಗಳನ್ನು ಪ್ರತಿಬಿಂಬಿಸುತ್ತದೆ (ರೋಮಾಪುರದವರಿಗೆ 5:20)? ಆ ವಾಕ್ಯದ ಬೆಳಕಿನಲ್ಲಿ ಆ ಭರವಸೆಯ ಬಗ್ಗೆ ಯೋಚಿಸಿ, "ಆ ಸಭೆ ಬಲಹೀನವಾಗಿತ್ತು ಮತ್ತು ಲೋಪ ಉಳ್ಳದಾಗಿದ್ದರೂ, ಯೇಸು ತನ್ನ ಪರಮಶ್ರೇಷ್ಠ ಪ್ರೀತಿಯನ್ನು ಭೂಮಿಯ ಮೇಲಿನ ಈ ವಸ್ತುವಿನ ಮೇಲೆ ಮಾತ್ರ ಸುರಿಸಿದನು. ಅವನು ನಿರಂತರವಾಗಿ ಹಂಬಲದಿಂದ ನೋಡುತ್ತಿದ್ದಾನೆ ಮತ್ತು ಅದನ್ನು ತನ್ನ ಪವಿತ್ರಾತ್ಮದಿಂದ ಬಲಗೊಳಿಸುತ್ತಿದ್ದಾನೆ" – ಎಲೆನ್ ಜಿ. ವೈಟ್, ಸಲೆಕ್ಟಡ್ ಮೆಸೇಜಸ್, ಪುಸ್ತಕ 2, ಪುಟ 396.

2. ಸಾಮಾನ್ಯವಾಗಿ ಕ್ರೈಸ್ತರು ಕೈಗಾರಿಕಾ, ವಾಣಿಜ್ಯ ಮತ್ತು ಮಹಾನಗರಗಳಲ್ಲಿ ಕ್ರೈಸ್ತರಾಗಿರುವುದು ಕಷ್ಟವೆಂದು ಹೇಳಿದ್ದಾರೆ. ಏಷ್ಯಾದ ಶ್ರೀಮಂತ ನಗರಗಳಲ್ಲಿ ಕೆಲವು ಕ್ರೈಸ್ತರು ಸುವಾರ್ತೆಗೆ ಪ್ರಾಮಾಣಿಕರಾಗಿದ್ದರು ಮತ್ತು ಅವರ ವಿಗ್ರಹಾರಾಧಕರ ಪರಿಸರದಿಂದ ಉಂಟಾದ ಒತ್ತಡದ ಮಧ್ಯೆ ಅವರು ದೇವರಿಗೆ ಅಸಹಜ ವಿಧೇಯತೆಯಿಂದಿದ್ದರು. ಈ ಸತ್ಯಾಂಶದಿಂದ ನಾವು ಏನು ಕಲಿಯಬಹುದು? ಯೋಹಾನ 17:15–19 ರಲ್ಲಿ ಯೇಸುವಿನ ಪ್ರಾರ್ಥನೆಯ ಬೆಳಕಿನಡಿಯಲ್ಲಿ ಏಷ್ಯಾದ ಆ ಕ್ರೈಸ್ತರ ಬಗ್ಗೆ ಆಲೋಚಿಸಿ.

ಲೋಕದಲ್ಲಿದ್ದರು ಲೋಕದವರಾಗಲ್ಲ ಎಂಬ ಕಲ್ಪನೆ ಈಗಿನ ಕ್ರೈಸ್ತರಿಗೆ, ವಿಶೇಷವಾಗಿ ರಾಜಧಾನಿ ನಗರಗಳಲ್ಲಿ ವಾಸಿಸುವವರಿಗೆ ಹೇಗೆ ಅನ್ವಯಿಸುತ್ತದೆ?

3. ಸೆವೆಂತ್ ಡೇ ಅಡ್ವೆಂಟಿಸ್ಟರಾದ ನಾವು, ಲವೊದಿಕೀಯದವರಿಗೆ ನೀಡಿದ ಸಂದೇಶದಲ್ಲಿ ನಮಗೆ ನೀಡಿರುವ ಮಾತುಗಳನ್ನು ಚೆನ್ನಾಗಿ ಹೇಗೆ ಗಮನಿಸಬಹುದು?